# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 245 |
| ಉತ್ತರಿಸಬೇಕಾದ ದಿನಾಂಕ | : | 14.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನುಗಳನ್ನು ಗುರುತಿಸಲಾಗಿದೆಯೇ; ಈ ಪೈಕಿ ಯಾವ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ; ಈ ಗೋಶಾಲೆಗಳಲ್ಲಿ ಲಭ್ಯವಿರುವ ಸೌಲಭ್ಯಗಳೇನು; ಈ ಗೋಶಾಲೆಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | 2021-22 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ 30 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೊಂದರಂತೆ ಸರ್ಕಾರಿ ಗೋಶಾಲೆಗಳನ್ನು ಸ್ಥಾಪಿಸಲು ಜಮೀನನ್ನು ಗುರುತಿಸಲಾಗಿದೆ.<br><br>ಈ ಪೈಕಿ 6 ಜಿಲ್ಲೆಗಳಾದ ಚಿಕ್ಕಮಗಳೂರು, ವಿಜಯಪುರ, ಹಾಸನ, ಮೈಸೂರು, ತುಮಕೂರು ಹಾಗೂ ಕೋಲಾರದಲ್ಲಿ ಸರ್ಕಾರಿ ಗೋಶಾಲೆಗಳು ಪ್ರಾರಂಬಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಗೋಶಾಲೆ ಕಾಮಗಾರಿ ಪ್ರಗತಿಯಲ್ಲಿದೆ.<br><br>ಸದರಿ ಗೋಶಾಲೆಗಳಲ್ಲಿ ಮೇವು, ನೀರು, ವಿದ್ಯುತ್ಚ್ಛಕ್ತಿ ಹಾಗೂ ಪಶುವೈದ್ಯಕೀಯ ಚಿಕಿತ್ಸಾ ಸೌಲಭ್ಯ ಲಭ್ಯವಿರುತ್ತದೆ.<br><br>2021-22 ಹಾಗೂ 2022-23 ನೇ ಸಾಲಿನಲ್ಲಿ ಪ್ರತಿ ಜಿಲ್ಲೆಗೆ ರೂ.1.00 ಕೋಟಿಯಂತೆ 30 ಜಿಲ್ಲೆಗಳಿಗೆ ಒಟ್ಟು ರೂ.30.00 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ. |
| ಆ) | ರಾಜ್ಯದಲ್ಲಿ ಇರಬಹುದಾದ ಬಿಡಾಡಿ ದನಗಳ ಸಂಖ್ಯೆಯ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ; ನಡೆಸಿದ್ದಲ್ಲಿ, ಜಿಲ್ಲಾವಾರು ಬಿಡಾಡಿ ದನಗಳ ಸಂಖ್ಯೆ ಎಷ್ಟು; ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಬಿಡಾಡಿ ದನಗಳಿಗೆ ಆಶ್ರಯ ನೀಡಲಾಗಿದೆ; (ವಿವರ ನೀಡುವುದು) | 20ನೇ ಜಾನುವಾರು ಗಣತಿ-2019 ರ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಬಿಡಾಡಿ ದನಗಳ ಸಂಖ್ಯೆ: 77075 (ಜಿಲ್ಲಾವಾರು ಮಾಹಿತಿ **ಅನುಬಂಧ-1** ರಲ್ಲಿ ನೀಡಲಾಗಿದೆ)<br><br>ಬೀಡಾಡಿ ದನಗಳಿಗೆ ಆಶ್ರಯದ ಅಗತ್ಯತೆ ಇದ್ದಲ್ಲಿ ಸರ್ಕಾರಿ / ಖಾಸಗಿ ಗೋಶಾಲೆಗಳಲ್ಲಿ ಆಶ್ರಯ ನೀಡಲಾಗುತ್ತಿದೆ. |

| | |
|---|---|
| ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಲು ಮತ್ತು ಇಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನವೆಷ್ಟು? (ಜಿಲ್ಲಾವಾರು ವಿವರ ನೀಡುವುದು) | ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಲು ಮತ್ತು 100 ಜಾನುವಾರುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನ ಈ ಕೆಳಕಂಡಂತೆ ಇರುತ್ತದೆ. |

| ಕ್ರ.ಸಂ | ವಿವರ | ಅಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಶೆಡ್ ನಿರ್ಮಾಣಕ್ಕೆ | 40.00 |
| 2 | ಜಾನುವಾರುಗಳ ನಿರ್ವಹಣೆಗೆ ಪ್ರತಿ ದಿನಕ್ಕೆ ರೂ.70.00 ರಂತೆ 365 ದಿನಗಳಿಗೆ- | 25.55 |
| 3 | 100 ಜಾನುವಾರುಗಳ ನಿರ್ವಹಣೆಗೆ 3 ಪಾಳಿಯಲ್ಲಿ ಗರಿಷ್ಠ 7 ಜನಕೂಲಿ/ ಹೊರಗುತ್ತಿಗೆ ರೂ.17000/ ತಿಂಗಳಿಗೆ | 14.28 |
| 4 | ಇತರೆ ವೆಚ್ಚಗಳು | 20.17 |
| | ಒಟ್ಟು | 100.00 |

2021-22 ಹಾಗೂ 2022-23 ನೇ ಸಾಲಿನಲ್ಲಿ ಒಟ್ಟು ಪ್ರತಿ ಜಿಲ್ಲೆಗೆ ರೂ.1.00 ಕೋಟಿಯಂತೆ 30 ಜಿಲ್ಲೆಗಳಿಗೆ ಅನುದಾನ ನೀಡಲಾಗಿದೆ.

ಇ- ಪಸಂಮೀ 192 ಸಲೆವಿ 2022

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

## Karnataka Legislative Council

| | | |
|---|---|---|
| Member's Name | : | Shri. S.Ravi (local bodies) |
| Starred Question No. | : | 245 |
| Date of answer | : | 14.09.2022 |
| To be Answered by | | Hon`ble Minister for Animal Husbandry |

| Sl. No | Question | Answer |
|---|---|---|
| a) | Whether land has been identified for starting Goshalas in each district of the state. In which districts, Goshalas have been started. What are the facilities available in these Goshalas; How much grant has been released for these Goshalas; (Give complete details district wise) | As announced in the budget for 2021-22, land has been identified in all 30 districts for setting up Government Goshalas.<br><br>Chikmagalur, Vijayapur, Hassan, Mysore, Tumkur and Kolar Government Goshalas have been started. Goshala work isunder progress in the rest of the districts.<br><br>Fodder, water, electricity and veterinary treatment facilities are available in these Goshalas.<br><br>In the year 2021-22 and 2022-23, a total grant of Rs. 30.00 crore has been released for 30 districts at the rate ofRs. 1.00 crore for each district. |
| b) | Whether a survey has been conducted on the number of stray cattle likely to exist in the state; If so, what is the number of stray cattle district wise; How many stray cattle have been sheltered in which districts; (give details) | Yes<br><br>As per 20th Livestock Census – 2019 the total number of stray cattle in the state is 77075 (District wise copy attached)<br><br>Shelter for stray cattle is being provided at private / Govt. goshalas if required |

| | | |
|---|---|---|
| c) | How much grants is required to construct Goshalas in each district and to provide basic facilities and day-to-day management?(Provide District wise details) | The grant required to construct Goshalas in each district and to provide basic facilities for 100 cattle and for day-to-day management is as follows.<br><br>(table below)<br><br>In the year 2021-22 and 2022-23, a total grant of Rs.1.00 crore per district has been given to 30 districts. |

| Sl.No | Particulars | Grant required (in Rs. lakhs) |
|---|---|---|
| 1 | For shed construction | 40.00 |
| 2 | Cattle maintenance Rs.70.00 per dayfor 365 days for 100 cattle | 25.55 |
| 3 | Wages at the rate of Rs.17000/month for maximum 7 workers in 3 shifts for management of 100 cattle. | 14.28 |
| 4 | Other Expenses | 20.17 |
| | Total | 100.00 |

**No: AHF E-192 AID 2022**

(Prabhu. B Chavan)
**Minister for Animal Husbandry**

ಅನುಬಂಧ

| Stray Cattle as per 20th LC-2019 | | |
|---|---|---|
| Sl.No. | District | Stray Cattle |
| 1 | Bagalkot | 4812 |
| 2 | Bangalore Rural | 611 |
| 3 | Belgaum | 5722 |
| 4 | Bellary | 5242 |
| 5 | Bengaluru Urban | 1598 |
| 6 | Bidar | 2993 |
| 7 | Bijapur | 3243 |
| 8 | Chamarajanagar | 530 |
| 9 | Chikballapur | 576 |
| 10 | Chikmagalur | 3451 |
| 11 | Chitradurga | 2962 |
| 12 | Dakshin Kannad | 903 |
| 13 | Davangere | 2092 |
| 14 | Dharwad | 2182 |
| 15 | Gadag | 3004 |
| 16 | Gulbarga | 4309 |
| 17 | Hassan | 1049 |
| 18 | Haveri | 2088 |
| 19 | Kodagu | 678 |
| 20 | Kolar | 651 |
| 21 | Koppal | 6510 |
| 22 | Mandya | 719 |
| 23 | Mysore | 2009 |
| 24 | Raichur | 6486 |
| 25 | Ramanagara | 687 |
| 26 | Shimoga | 2307 |
| 27 | Tumkur | 1624 |
| 28 | Udupi | 2192 |
| 29 | Uttar Kannad | 3860 |
| 30 | Yadgir | 1985 |
| **Grand Total** | | **77075** |

**ಪೂರಕ ಟಿಪ್ಪಣಿ**

**ವಿಧಾನ ಪರಿಷತ್**

**37 (245)** ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

2020-21ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರಾಜ್ಯದಲ್ಲಿನ ಗೋಸಂಪತ್ತನ್ನು ರಕ್ಷಿಸಲು ಕರ್ನಾಟಕ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣಾ ಅಧಿನಿಯಮ 2020 ಜಾರಿಗೊಳಿಸಲಾಗಿದೆ.

ಈ ಕಾಯ್ದೆ ಜಾರಿಗೊಳಿಸದ ರಕ್ಷಿಸಲಾದ ಜಾನುವಾರುಗಳನ್ನು ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ಗೋಶಾಲೆಯನ್ನು ಪ್ರಾರಂಭಿಸಲು 2021-22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿದೆ. ಇದಕ್ಕಾಗಿ 2021-22ನೇ ಸಾಲಿನ ಆಯವ್ಯದಲ್ಲಿ ರೂ.1500-00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಅನುದಾನದಲ್ಲಿ 30 ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಗೊಂದರಂತೆ ಸರ್ಕಾರಿ ಗೋಶಾಲೆಗಳನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ.

ಈಗಾಗಲೇ 6 ಜಿಲ್ಲೆಗಳಾದ ಚಿಕ್ಕಮಗಳೂರು, ವಿಜಯಪುರ, ಹಾಸನ, ಮೈಸೂರು, ತುಮಕೂರು ಹಾಗೂ ಕೋಲಾರದಲ್ಲಿ ಸರ್ಕಾರಿ ಗೋಶಾಲೆಗಳು ಪ್ರಾರಂಭಿಸಲಾಗಿದೆ. ಉಳಿದ 24 ಜಿಲ್ಲೆಗಳಲ್ಲಿ ಗೋಶಾಲೆ ಕಾಮಗಾರಿಗಳು ಜಾರಿಯಲ್ಲಿರುತ್ತವೆ. ಶೀಘ್ರದಲ್ಲಿ ಈ ಗೋಶಾಲೆಗಳನ್ನು ಪ್ರಾರಂಭಿಸಲಾಗುವುದು.

2022-23ನೇ ಸಾಲಿನಲ್ಲಿ 31 ರಿಂದ 100 ಕ್ಕೆ ಸರ್ಕಾರಿ ಗೋಶಾಲೆಗಳನ್ನು ಹೆಚ್ಚಿಸಲು ಘೋಷಣೆ ಮಾಡಲಾಗಿದೆ. ಇದಕ್ಕಾಗಿ ಸರ್ಕಾರವು ಒಟ್ಟು ರೂ.35.00 ಕೋಟಿ ಅನುದಾನ ನಿಗದಿಪಡಿಸಲಾಗಿದೆ.

70 ಹೊಸ ಗೋಶಾಲೆಗಳನ್ನು ಪ್ರಾರಂಭಿಸಲು ಪ್ರಕ್ರಿಯೆಯಲ್ಲಿ ಈಗಾಗಲೇ 12 ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನು ಮಂಜೂರಾಗಿರುತ್ತದೆ, 40 ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನನ್ನು ಗುರುತಿಸಲಾಗಿದೆ, ಇನ್ನುಳಿದ 18 ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿದೆ.

20 ನೇ ಜಾನುವಾರು ಗಣತಿ – 2019 ರ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಬಿಡಾಡಿ ದನಗಳ ಸಂಖ್ಯೆ 77075 (ಜಿಲ್ಲಾವಾರು ಪ್ರತಿ ಲಗತ್ತಿಸಿದೆ) ಬೀಡಾಡಿ ಜಾನುವಾರುಗಳಿಗೆ ಅಶ್ರಯದ ಆಗತ್ಯತೆ ಇದ್ದಲ್ಲಿ ಸರ್ಕಾರಿ / ಖಾಸಗಿ ಗೋಶಾಲೆಗಳಲ್ಲಿ ಆಶ್ರಯ ನೀಡಲಾಗುತ್ತಿದೆ.

ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ನಿರ್ಮಾಣ ಮಾಡಲು ಮತ್ತು 100 ಜಾನುವಾರುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಅನುದಾನ ಈ ಕೆಳಕಂಡಂತೆ ಇರುತ್ತದೆ.

| **ಕ್ರ. ಸಂ** | **ವಿವರ** | **ಅಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ)** |
|---|---|---|
| 1 | ಶೆಡ್ ನಿರ್ಮಾಣಕ್ಕೆ | 40.00 |
| 2 | ಜಾನುವಾರುಗಳ ನಿರ್ವಹಣೆಗೆ ಪ್ರತಿ ದಿನಕ್ಕೆ ರೂ.70.00 ರಂತೆ 365 ದಿನಗಳಿಗೆ- | 25.55 |
| 3 | 100 ಜಾನುವಾರುಗಳ ನಿರ್ವಹಣೆಗೆ 3 ಪಾಳಿಯಲ್ಲಿ ಗರಿಷ್ಠ 7 ಜನ ಕೂಲಿ/ ಹೊರಗುತ್ತಿಗೆ ರೂ.17000 /ತಿಂಗಳಿಗೆ | 14.28 |
| 4 | ಇತರೆ ವೆಚ್ಚಗಳು | 20.17 |
| | ಒಟ್ಟು | 100.00 |